ನಾನು ಕೊಡಿಸಿದ್ದೀನಿ. ಕಳ್ಕೊಬೇಡಿ. ಇವೆಲ್ಲ ಚಿಕ್ಕ ಸಂಗತಿಗಳು ಅಷ್ಟೇ. ಡಾಕ್ಟರೇಟ್ ತಗೋಬೇಕಾದ್ರೆ ಏನೇನ್ ಮಾಡಬೇಕಾಗುತ್ತೆ ಗೊತ್ತಾ? ಥೀಸಿಸ್ ಎಲ್ಲ ರೆಡಿಯಾಗಿದೆ. ಇನ್ನು ಗೈಡ್ ಸೈನ್ ಮಾತ್ರ ಬೇಕು. ಅದು ಬಿದ್ರೆ ಮುಗೀತು. ಆದರೆ, ಗೈಡ್ ಅಷ್ಟು ಸುಲಭಕ್ಕೆ ಸೈನ್ ಮಾಡ್ತಾರಾ? ಇನ್ನೊಂದು ವರ್ಷ... ಹೋದ್ರೆ ಹೋಗ್ಲಿ ಅಂತ ಹುಡುಗರು ಸಿದ್ಧ ಆಗಿ ಬಿಲ್ ಕಟ್ತಿದಾರೆ. ಇನ್ನು ಕೆಲವು ಹೆಣ್ಮಕ್ಳು ತಮಗೆ ಡಾಕ್ಟರೇಟ್ ಬೇಕೇ ಬೇಕು ಅನ್ನೋದಕ್ಕೆ... ಅಲ್ಲಿ ನಿನ್ನ ಪಕ್ಕದಲ್ಲಿ ಯಾರೂ ಇಲ್ಲ ತಾನೇ?'.

'ಇಲ್ಲ ಸರ್, ಯಾಕೆ?'

'ಏನಿಲ್ಲ, ಕೆಲ ಹೆಣ್ಮಕ್ಳು ಸೆರಗು ಹಾಸೋಕೂ ರೆಡಿ ಇದ್ದಾರೆ...' ಎಂದು ಅವರು ಹೇಳುವ ಹೊತ್ತಿಗೆ ಪ್ರಣತಿ ಲೈನ್ ಕಟ್ ಮಾಡಿ ಕೈಕಟ್ಟಿಕೊಂಡು ನೆಟ್ಟನೋಟದಲ್ಲಿ ನಿಂತಳು. ಖಾಲಿಕೊಡ ಅವಳನ್ನು ಅಲುಗಿಸಿ ಏನಾಯ್ತು ಎಂದು ಕೇಳಿದ. ಪ್ರಣತಿ ಮಾತಾಡಲಿಲ್ಲ. ಕಲ್ಲಿನ ಹಾಗೆ ನಿಂತಿದ್ದಳು. ಖಾಲಿಕೊಡ ಅವಳ ಕಣ್ಣುಗಳೆದುರು ಕೈ ತಂದು ಅಲುಗಿಸಿ ನೋಡಿದ. ಅವಳ ಕಣ್ಣ ಗುಡ್ಡೆಗಳು ಮಾತ್ರ ಖಾಲಿಕೊಡದ ಕೈ ಚಲನೆಗೆ ಅನುಸಾರವಾಗಿ ಕದಲಿದವು. ಉಳಿದಂತೆ ಸ್ತಬ್ಧತೆ. ಖಾಲಿಕೊಡ ನೇರ ವರದರಾಜಪ್ಪನವರಿಗೇ ಫೋನ್ ಮಾಡಿ ಏನಾಯ್ತು ಅಂತ ವಿಚಾರಿಸಿದ. 'ಏನಿಲ್ಲ ಕಣಾ. ಸಮಯ ಸಂದರ್ಭ ಒಂದೇ ಥರ ಇರೋದಿಲ್ಲ ಅನ್ನೋದಕ್ಕೆ ನಮ್ಮ ಹಳ್ಳಿ ಕಡೆ ಒಂದು ಮಾತು ಹೇಳ್ತಾರೆ, ಸೈಜು ಒಂದು ಉದ್ದ ಒಂದು ಗಿಡ್ಡ. ಅಡ್ಜಸ್ಟ್ ಮಾಡ್ಕ... ಅಂತ ಹೇಳೋಣ ಅಂತಿದ್ದೆ ಅಷ್ಟರಲ್ಲಿ...' ಖಾಲಿಕೊಡಕ್ಕೂ ಏನೂ ಅರ್ಥವಾಗಲಿಲ್ಲ.

## 10

ಇದೆಲ್ಲ ಆಗಿ ಸರಿಯಾಗಿ ಹತ್ತು ದಿನ. ಆ ಹತ್ತು ದಿನಗಳೂ ಪ್ರಣತಿ ಖಾಲಿಕೊಡವನ್ನು ಮಾತಾಡಿಸಿರಲಿಲ್ಲ. ಒಂದು ದಿನ ಏಕಾಏಕಿ ಅವನಿಗೆ ಕರೆ ಮಾಡಿ ಇವತ್ತಿನ ಪೇಪರ್ ಮೂರನೇ ಪುಟ ಓದು ಅಂತಷ್ಟೇ ಅಂದಳು. ಖಾಲಿಕೊಡ ಪೇಪರ್ ಬಿಡಿಸಿ ಕಣ್ಣಾಡಿಸಿತು- 'ಒಂದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ಬೇರೊಂದು ವಿಶ್ವವಿದ್ಯಾಲಯದಿಂದ ಪರವಾನಗಿ ಪಡೆದು ಪಿಎಚ್.ಡಿ ಕೋರ್ಸ್‌ಗಳನ್ನು ಆರಂಭಿಸಿರುವುದು ಗಮನಕ್ಕೆ ಬಂದಿದೆ. ಆ ರೀತಿ ಪರವಾನಗಿ ಪಡೆದು ಕೋರ್ಸ್‌ಗಳನ್ನು ನಡೆಸುವಂತಿಲ್ಲ. ಇವುಗಳನ್ನು ಕೂಡಲೇ ನಿಲ್ಲಿಸದಿದ್ದರೆ ಕಾನೂನಿನ ರೀತಿ ಕ್ರಮ ಕೈಗೊಂಡು ನಿಲ್ಲಿಸಲಾಗುವುದು...'

## 11

ಅಲ್ಲಿಂದಾಚೆಗೆ ಖಾಲಿಕೊಡ ಮಾತು ನಿಲ್ಲಿಸಿತು. ಆದರೆ ಪ್ರಣತಿ ಗೆಲುವಾದಳು ಮತ್ತು ಖಾಲಿಕೊಡವನ್ನು ಮಾತಿಗೆ ಎಳೆಯಲು ಆರಂಭಿಸಿದಳು. ಏನು ಮಾಡಿದರೂ ಮಂಕಾಗೇ ಇರುತ್ತಿದ್ದ ಖಾಲಿಕೊಡವನ್ನು ಹೊರಗೆ ಎಲ್ಲಾದರೂ ಅಡ್ಡಾಡಿಸಿಕೊಂಡು ಬರಬೇಕು ಅನಿಸಿ ತಾನು ಗಾಡಿ ಹತ್ತಿ ಅವನನ್ನು ಹಿಂದೆ ಕೂರಿಸಿಕೊಂಡು ಬೇಕೆನಿಸಿದ ಕಡೆ ಎಲ್ಲ ಸುತ್ತಾಡಿದಳು. ಆದರೂ ಖಾಲಿಕೊಡದ ಮುಖ ಅರಳಲಿಲ್ಲ. ಇದು ತನಗಿಂತ ಜಿಗುಟಿನ ಆಸಾಮಿ. ಬೇಗ ಬದಲಾಗಲ್ಲ.ಮನೆ ಬಳಿ ಕೆಡವಿ ಹೋದ್ರೆ ಸರಿ ಅನಿಸಿ ಗಾಡಿ ಓಡಿಸುತ್ತಿದ್ದಾಗ ಚಿತ್ರಕಲಾ ಪರಿಷತ್ ಬಳಿ ಇದ್ದ 'ಟ್ರೆಡಿಷನಲ್ ಪ್ರೇಟಿಂಗ್ಸ್' ಬೋರ್ಡ್ ಅವಳ ಗಮನ ಸೆಳೆಯಿತು. ಚಿತ್ರಗಳೆಂದರೆ ಮೊದಲಿಂದ ಇಷ್ಟಪಡುತ್ತಿದ್ದ ಪ್ರಣತಿ ಖಾಲಿಕೊಡವನ್ನು ಲೆಕ್ಕಿಸದೆ ಪರಿಷತ್ ಒಳಪ್ರವೇಶಿಸಿ ಗಾಡಿ ಪಾರ್ಕ್ ಮಾಡಿ ತನ್ನಷ್ಟಕ್ಕೆ ನಡೆಯಲು ಆರಂಭಿಸಿದಳು. ಖಾಲಿಕೊಡ ಕೊಂಚ ವಾಸ್ತವಕ್ಕೆ ಬಂದವನಂತೆ ಅವಳನ್ನು ಹಿಂಬಾಲಿಸಿದ. ಹಲವು ದೇವತೆಗಳ ಚಿತ್ರಗಳನ್ನು ಕಣ್ಣರಳಿಸಿ ನೋಡಲು ಆರಂಭಿಸಿದ ಪ್ರಣತಿ ಒಂದು ಚಿತ್ರದ ಬಳಿ ನಿಂತು ತದೇಕಚಿತ್ತದಿಂದ ಅದೊಂದನ್ನೇ ತನ್ನ ಧ್ಯಾನದ ಕೇಂದ್ರವಾಗಿಸಿಕೊಂಡು ನೋಡಲು ಶುರುಮಾಡಿದಳು. ಮುಂದಕ್ಕೆ ಕದಲದೆ ಹಾಗೇ ನಿಂತುಬಿಟ್ಟ ಪ್ರಣತಿಯನ್ನ ಮತ್ತು ಅವಳು ನೋಡುತ್ತಿದ್ದ ಚಿತ್ರವನ್ನ ಖಾಲಿಕೊಡ ನೋಡಲು ಆರಂಭಿಸಿದ. ಅದು ಶಾರದೆಯ ಚಿತ್ರ. ಅದನ್ನು ಬಿಡಿಸಿದ್ದ ಚಿತ್ರಕಲಾವಿದ ಶಾರದೆಯನ್ನ ಕಲ್ಲಿನ ಮೇಲೆ ಕೂರಿಸಿದ್ದ. ಇದನ್ಯಾಕೆ ಇವಳು ಹೀಗೆ ಇಷ್ಟೊತ್ತು ನೋಡುತ್ತಿದ್ದಾಳೆ ಎಂದು ಯೋಚಿಸುತ್ತ ಆ ಚಿತ್ರದಲ್ಲಿ ತನಗೇನಾದರೂ ಹೊಸದು ಕಂಡೀತೇ ಎಂದು ತಾನೂ ನೋಡುತ್ತಾ ನಿಂತ. ಏನೂ ಹೊಳೆಯಲಿಲ್ಲ. ಶಾರದೆ ಸಾಮಾನ್ಯವಾಗಿ ಕಮಲದ ಮೇಲೆ ಕೂತಿರುವುದು... ಬೇರೆ ಚಿತ್ರದಲ್ಲಿ ನವಿಲಿನ ಮೇಲೆ ಕೂತದ್ದೂ ಇದೆ. ಇದೇನಿದು ಕಲ್ಲಿನ ಮೇಲೆ? ಎಂದು ಯೋಚಿಸುತ್ತಲೇ ಹೋದ. ಪ್ರಣತಿ ಅದೇ ಚಿತ್ರ ನೋಡುತ್ತ 'ಬ್ಯೂಟಿ ಆ್ಯಂಡ್ ಆಪ್ಟ್' ಅಂದಳು.

●